ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಸರ್ಕಾರಿ ದಂತ ಮಹಾ ವಿದ್ಯಾಲಯದ ಕ್ಯಾಂಟೀನನ್ನು ಸದರಿ ವಿದ್ಯಾಲಯದ ವಿದ್ಯಾರ್ಥಿ ಸಂಘದವರಿಂ ಲಾಭ ಮತ್ತು ನಷ್ಟ ವಿಲ್ಲದೆ ಸುಮಾರು ೫-೬ ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲಿನ ವಿದ್ಯುಚ್ಛಕ್ತಿಗೆ ತಗಲುವ ಖರ್ಚನ್ನು ಸಂಘದವರೇ ಸಂದಾಯ ಮಾಡುತ್ತಿದ್ದಾರೆ. ಈ ಕ್ಯಾಂಟೀನ್‌ನಲ್ಲಿ ತಿಂಡಿ ತಿನಿಸುಗಳನ್ನು ಕಡಿಮೆ ಬೆಲೆಗೆ ಕೊಡಲು ವ್ಯವಸ್ಥೆ ಮಾಡಲಾಗಿದೆ. ಈ ಕ್ಯಾಂಟೀನನ್ನು ನಡೆಸಲು ಸಿಬ್ಬಂದಿ ವರ್ಗದವರಿಗೆ ಬೆ ಕಾದ ಸ್ಥಳವನ್ನು ಮತ್ತು ನೀರಿನ ಸೌಲಭ್ಯಗಳನ್ನು ಸರ್ಕಾರವು ಒದಗಿಸಿದೆ.

ವಿದ್ಯಾರ್ಥಿ ಸಂಘದವರಿಗೆ ಉತ್ತೇಜನ ಕೊಡುವ ಸಲುವಾಗಿ ಅವರಿಗೆ ಈ ಉಪಹಾರ ಗೃಹವನ್ನು ನಡೆಸಲು ಅನುಮತಿ ಕೊಡಲಾಗಿದೆ. ಸದರಿ ಸಂಘವು ಈ ಉಪಹಾರ ಗೃಹವನ್ನು ಸಂಗಮವಾಗಿ ನಡೆಸಿ ಕೊಂಡು ಬರುತ್ತಿದೆ. ಆದುದರಿಂದ ಈ ವ್ಯವಸ್ಥೆಯನ್ನು ಬದಲಾಯಿಸುವುದು ಸೂಕ್ತವಲ್ಲವೆಂದು ಖಾವಿಸಲಾಗಿದೆ.

(೩) ರಾಜ್ಯದ ಅರ್ಬನ್ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಬೋರ್ಡ್ ನೌಕರರು ಮುಷ್ಕರ ಹೂಡಿರುವುದರಿಂದ ಸಾರ್ವಜನಿಕರಿಗೆ ತೊಂದರೆ ಯಾಗಿರುವುದು.

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕ ರಾಜ್ಯದ ಅರ್ಬನ್ ವಾಟರ್ ಸಪ್ಲೈ ಮತ್ತು ಡ್ರೈನೇಜ್ ಬೋರ್ಡ್ ನೌಕರರು ೧೫-೬-೧೯೮೮ರಂದು ಕೇಂದ್ರ ಕಛೇರಿ ಚಲೋ ಕಾರ್ಯಕ್ರಮ ಕೊಟ್ಟಿದ್ದಾರೆ. ೨೩-೬-೧೯೮೮ರಿಂದ ಅನಿರ್ಧಿಷ್ಟ ಕಾಲದ ಮುಷ್ಕರಕ್ಕೆ ಕರೆಕೊಟ್ಟಿದ್ದಾರೆ. ಸರ್ಕಾರಕ್ಕೆ ಮೇ ೨೧ರಂದು ಮನವಿ ಕೊಟ್ಟಿದ್ದಾರೆ. ಆದರೂ ಸರ್ಕಾರ ಅವರ ನ್ಯಾಯಯುತವಾದ ಬೇಡಿಕೆಗಳನ್ನು ಒಪ್ಪಿಲ್ಲ. ಒಪ್ಪಿದ ಬೇಡಿಕೆಗಳನ್ನು ಅನುಷ್ಠಾನಕ್ಕೆ ತರಲಿಲ್ಲ. ೨೩ರಂದೂ ಕುಡಿಯುವ ನೀರಿನ ಸರಬರಾಜು ಬಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುವುದು. ಆದ್ದರಿಂದ ಈ ಬಗ್ಗೆ ಸೂಕ್ತ ಪರಿಹಾರ ಸಿಗದೆ ಇರುವುದರಿಂದ ನಗರಾಭಿವೃದ್ಧಿ ಸಚಿವರ ಗಮನ ಸೆಳೆದು ಹೇಳಿಕೆಯನ್ನು ಕೇಳ ಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸಚಿವರು ಆ ಮನೆಯಲ್ಲಿದ್ದಾರೆ. ಇದಕ್ಕೆ ಉತ್ತರವನ್ನು ತರಿಸಿಕೊಡುತ್ತೇನೆ.

(೪) ಕೋಲಾರದ ಮೈಸೂರು ಗಣಿ ಪ್ರೌಢ ಶಾಲೆಯಲ್ಲಿ ಕನ್ನಡ ಉಪಾಧ್ಯಾಯರು ಇಲ್ಲದಿರುವುದು

Sri T. S. Mani.—At Mysore Mines High School, K.G.F. Kannada Medium is introduced since last year as per the government policy, but there is no kannada teacher. Inspite of repeated representations to the Govt, Kannada Teacher is not posted. How the students can learn Kannada without Kannada teacher and how the Government expect the school to teach kannada ?

Sri A. Lakshmisagar.—I will get the reply and make it available to the hon. member.

(೫) ಕಾಪು ಕ್ಷೇತ್ರದ ಮೂಳೂರು ಗ್ರಾಮದ ದಾರೋಡ್ಕಟ್ಟ ಅಣೆಕಟ್ಟನ್ನು ನಿರ್ಮಿಸಲು ಮನವಿ

ಶ್ರೀ ಪಸಂತ ವಿ. ಸಾಲಿಯಾನ.—ಕಾಪು ಕ್ಷೇತ್ರದ ಮೂಳೂರು ಗ್ರಾಮದ ದಾರೋಡ್ಕಟ್ಟ ಎಂಬ ನೀರಾವರಿ ಕಟ್ಟವನ್ನು ಮೊದಲಂ ಊರಿನ ಜನರೇ ಸೇರಿಕೊಂಡು ಸ್ವಂತ ಖರ್ಚಿನಿಂದ ಮಣ್ಣಿನ ಕಟ್ಟ